38

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಾಮುಖ್ಯತೆಯ ಪ್ರಕಟಣೆಗಳು. [ನಂ. 39.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 29, ಸನ್ 1904.

III ನೆ ಭಾಗ.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

(1904ನೆಯ ವರ್ಷದ 111ನೆಯ ನಂಬರ್ ರೆಗ್ಯುಲೇಷನ್.)

(1904ನೆಯ ವರ್ಷದ ಮಾರ್ಚಿ 15ನೆಯ ತಾರೀಖಿನಲ್ಲಿ ಮಂಜೂರಾದ್ದು)

ಗ್ರಂಥ ಸಮುದಾಯಕ್ಕೂ, ಶಾಸ್ತ್ರಕ್ಕೂ, ಮತ್ತು ಧರ್ಮಕಾರ್ಯಕ್ಕೂ ಸಂಬಂಧಪಡುವ ಸಂಘಗಳ ರಿಜಿಸ್ಟ್ರೇಷನ್‌ಬಗ್ಗೆ ಆದ ರೆಗ್ಯುಲೇಷನ್.

ಪೀಠಿಕೆ.

ಸಾಹಿತ್ಯವನ್ನು, ಶಾಸ್ತ್ರವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಅಥವಾ ಉಪಯುಕ್ತವಾದ ಜ್ಞಾನಪ್ರಸರಣಕ್ಕೋಸ್ಕರ ಅಥವಾ ಧರ್ಮಕಾರ್ಯಗಳಿಗಾಗಿ ಏರ್ಪಟ್ಟ ಸಂಘಗಳ ವ್ಯವಹಾರಾನುರೂಪವಾದ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಉಪಾಯ ಹೂಡುವುದು ಯುಕ್ತವಾದುದರಿಂದ; ಶ್ರೀಮೂ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ:—

1. (1) ಈ ರೆಗ್ಯುಲೇಷನ್, "1904ನೆಯ ವರ್ಷದ ಸಂಘಗಳ ರಿಜಿಸ್ಟ್ರೇಷನ್ ರೆಗ್ಯುಲೇಷನ್" ಎಂದು ಕರೆಯಲ್ಪಡಬಹುದು.

ಚಿಕ್ಕ ಹೆಸರು, ವ್ಯಾಪ್ತಿ ಅಮಲ್ ಪುರು.

(2) ಇದು ಮೈಸೂರಿಗೆಲ್ಲಾ ವ್ಯಾಪಿಸುತ್ತದೆ; ಮತ್ತು

(3) ಇದು ಸರ್ಕಾರಿ ಗೆಜೆಟಿನಲ್ಲಿ ಮೊದಲು ಪ್ರಕಟಿಸಲ್ಪಡುವ ತಾರೀಖಿನಲ್ಲಿ* ಜಾರಿಗೆ ಬರತಕ್ಕದ್ದು.

2. ಸಾಹಿತ್ಯಕ್ಕೂ, ಶಾಸ್ತ್ರಕ್ಕೂ ಅಥವಾ ಧರ್ಮಕಾರ್ಯಗಳಿಗೂ ಸಂಬಂಧಪಡುವ ಉದ್ದೇಶಕ್ಕಾಗಲೀ, ಅಥವಾ ಈ ರೆಗ್ಯುಲೇಷನಿನ 21ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟಂತಿರುವ ಇತರ ಯಾವ ಉದ್ದೇಶಕ್ಕಾಗಲೀ ಕೂಡಲ್ಪಟ್ಟ ಯಾವ ಏಳು ಅಥವಾ ಅಧಿಕ ಸಂಖ್ಯೆಯುಳ್ಳ ಜನಗಳು, ಒಂದು ಮೆಮೊರಾಂಡಂ ಆಫ್ ಅಸೋಸಿಯೇಷನಿಗೆ ಮತ್ತು ಆ ಸಂಘದ ಪತ್ರಕ್ಕೆ ತಾವು ರುಜು ಮಾಡುವುದರಿಂದಲೂ ಮತ್ತು ಅದನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪೆನೀಸ್ ಯವರಲ್ಲಿ ದಾಖಲ್ಮಾಡುವದರಿಂದಲೂ, ಈ ರೆಗ್ಯುಲೇಷನಿನಂತೆ ಒಂದು ಸಂಘವನ್ನು ಏರ್ಪಡಿಸಿಕೊಳ್ಳಬಹುದು.

ಮೆಮೊರಾಂಡಂ ಆಫ್ ಅಸೋಸಿಯೇಷನ್ ಮತ್ತು ಸಂಘದ ಪತ್ರ ಮತ್ತು ರಿಜಿಸ್ಟ್ರೇಷನ್ ಇವುಗಳಿಂದ ಸಂಘಗಳನ್ನು ಏರ್ಪಡಿಸೋಣ.

* ಮೊದಲನೆಯ ಪ್ರಕಟನದ ತಾರೀಖು 31ನೆ ಮಾರ್ಚ್ 1904.

3. ಮೆಮೊರಾಂಡಂ ಆಫ್ ಅಸೋಸಿಯೇಷ್ಷ ಎಂಬ ಸಂಘದ ಪತ್ರದಲ್ಲಿ ಈ ಕೆಳಗೆ ಬರುವ ವಿಷಯಗಳು ಇರತಕ್ಕದ್ದು (ಅದೇನಂದರೆ,—

ಮೆಮೊರಾಂಡಂ ಆಫ್ ಅಸೋಸಿಯೇಷ್ಷ ವಾ ಸಂಘದ ಪತ್ರ.

ಸಂಘದ ಹೆಸರು :

ಸಂಘದ ಉದ್ದೇಶಗಳು :

ಸಂಘದ ಕಾರ್ಯಗಳ ನಿರ್ವಾಹವು ಅದರ ನಿಬಂಧನೆಗಳಿಗೆ ಅನುಸಾರವಾಗಿ ಯಾರಿಗೆ ಒಪ್ಪಿಸಲ್ಪಟ್ಟಿರುತ್ತದೆಯೋ ಆ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ— ಇವೆರುಗಳ ಹೆಸರುಗಳು, ವಿಳಾಸಗಳು ಮತ್ತು ಉದ್ಯೋಗಗಳು.

ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಒಂದು ನಕಲು, ಕಾರ್ಯ ನಿರ್ವಾಹ ಸಭೆಯವರ ಪೈಕಿ ಮೂರಕ್ಕೆ ಕಡಮೆ ಇಲ್ಲದ ಸಂಖ್ಯೆಯುಳ್ಳ ಸಾಮಾಜಿಕರುಗಳಿಂದ ಸರಿಯಾದ ನಕಲೆಂದು ಸರ್ಟಿಫೈ ಮಾಡಲ್ಪಟ್ಟು, ಮೆಮೊರಾಂಡಂ ಆಫ್ ಅಸೋಸಿಯೇಷ್ಷ ವಾ ಸಂಘದ ಪತ್ರದೊಂದಿಗೆ ದಾಖಲ್ಮಾಡತಕ್ಕದ್ದು.

4. ಸದರೀ ಮೆಮೊರಾಂಡಂ ವಾ ಸಂಘದ ಪತ್ರ ಮತ್ತು ಸರ್ಟಿಫೈ ಮಾಡಲ್ಪಟ್ಟ ನಕಲು ದಾಖಲಾದ ಬಳಿಕ, ಈ ರೆಗ್ಯುಲೇಷನಿನ ಪ್ರಕಾರ ಸಂಘವು ರಿಜಿಸ್ಟ್ರರ್ ಮೊಡಲ್ಪಟ್ಟಿರುತ್ತೆಂದು ರಿಜಿಸ್ಟ್ರಾರು ತಮ್ಮ ಕೈಯಿಂದ ಸರ್ಟಿಫೈ ಮಾಡತಕ್ಕದ್ದು. ಅಂಥಾ ಪ್ರತಿ ರಿಜಿಸ್ಟ್ರೇಷ್ಷಬಗ್ಗೆ ಇಷ್ಟೆತ್ತು ರೂಪಾಯಿ ಫೀಸು ಆಗಲೀ ಅಥವಾ ಆಗಿಂದಾಗ್ಗೆ ಗವರನ್ಮೆಂಟಿನವರು ವಿಧಿಸಬಹುದಾದ ಕಮ್ಮಿ ಫೀಸು ಆಗಲೀ ರಿಜಿಸ್ಟ್ರಾರಿಗೆ ಕೊಡಲ್ಪಡತಕ್ಕದ್ದು ; ಮತ್ತು ಹಾಗೆ ಪಾವತಿ ಮಾಡಲ್ಪಟ್ಟ ಎಲ್ಲಾ ಫೀಸುಗಳು ಗವರನ್ಮೆಂಟಿನವರಿಗೆ ಜಮೆಯಾಗತಕ್ಕದ್ದು.

ರಿಜಿಸ್ಟ್ರೇಷ್ಷ ಫೀಸು.

5. ಪ್ರತಿ ವರ್ಷಕ್ಕೆ ಒಂದಾವರ್ತಿ, ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಮಾಡಲ್ಪಟ್ಟ ಸಾಮಾಜಿಕರ ವರ್ಷಗಟ್ಟಲ್ಲಿಯ ಸಾಮಾನ್ಯ ಕೂಟದ ತಾರೀಖಿನಿಂದ ಹದಿನಾಲ್ಕು ದಿವಸಗಳಿಗೆ ಮುಂಚೆಯಾಗಲೀ ಅಥವಾ ಹದಿನಾಲ್ಕನೆಯ ದಿವಸದಲ್ಲಾಗಲೀ, ಅಥವಾ ಆ ನಿಬಂಧನೆಗಳಲ್ಲಿ ಒಂದು ವರ್ಷಗಟ್ಟಲ್ಲಿಯ ಸಾಮಾಜಿಕರ ಸಾಮಾನ್ಯ ಕೂಟಕ್ಕೆ (ಜನರಲ್ ಮೀಟಿಂಗಿಗೆ) ಅವಕಾಶವಿಲ್ಲದಿರುವ ಪಕ್ಷದಲ್ಲಿ ಜನವರೀ ತಿಂಗಳಲ್ಲಿ, ಸಂಘದ ಕಾರ್ಯಗಳ ಆಡಳಿತೆಯನ್ನು ವಹಿಸಿರುವ ಅಧಿಕಾರಿ (ಗವರ್ನರ) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರ್ಸ್), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ ಇವೆರುಗಳ ಹೆಸರುಗಳು, ವಿಳಾಸಗಳು, ಮತ್ತು ಉದ್ಯೋಗಗಳು ಇವುಗಳ ಒಂದು ಪಟ್ಟಿಯನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪೆನೀಸ್ ಯವರಲ್ಲಿ ದಾಖಲ್ ಮಾಡತಕ್ಕದ್ದು.

ನಿರ್ವಾಹ ಸಭೆಯ ಪಟ್ಟಿಯನ್ನು ಪ್ರತಿವರ್ಷದಲ್ಲಿಯೂ ದಾಖಲು ಮಾಡತಕ್ಕದ್ದು.

6. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಸಂಘಕ್ಕೆ ಸೇರಿದ ಚರ ಮತ್ತು ಸ್ಥಿರ ಸೊತ್ತು, ನಿಕ್ಷೇಪಧಾರಿ (ಟ್ರಸ್ಟಿ) ಗಳ ವಶ ಮಾಡಲ್ಪಡದೆ ಇರುವ ಸಂದರ್ಭದಲ್ಲಿ, ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯುವರಿಗೆ ತಾತ್ಕಾಲಿಕವಾಗಿ ಕೊಡಲ್ಪಟ್ಟಿರುವುದಾಗಿ ಎಣಿಸತಕ್ಕದ್ದು ; ಮತ್ತು, ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ವಾಜ್ಯಗಳಲ್ಲಿ ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯ ಸೊತ್ತೆಂದು ಅವರುಗಳ ಸರಿಯಾದ ವಿಳಾಸದೊಂದಿಗೆ ವಿವರಿಸಲ್ಪಡತಕ್ಕದ್ದು.

ಸಂಘದ ಸೊತ್ತನ್ನು ಹ್ಯಾಗೆ ವಶಮಾಡೋಣ.

7. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಪ್ರತಿ ಸಂಘದ ಮೇಲೆ ಇತರರು ಮಾಡುವ ದಾವೆಗಳು ಮತ್ತು ಇತರರ ಮೇಲೆ ಅಂಥಾ ಸಂಘವು ಮಾಡುವ ದಾವೆಗಳು, ಅಂಥಾ ಸಂಘದ ನಿಬಂಧನೆಗಳಿಂದಾಗಲೀ ಖಾನೂನುಗಳಿಂದಾಗಲೀ ನಿಷ್ಕರ್ಷಿಸಲ್ಪಟ್ಟಂತೆ, ಅಧ್ಯಕ್ಷ, ಸಭಾಪತಿ ಅಥವಾ ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀಸ್) ಗಳು—ಇವರುಗಳ ಹೆಸರಲ್ಲಿ ನಡಿಯುತ್ತಕ್ಕದ್ದು ; ಮತ್ತು ಹಾಗೆ ನಿಷ್ಕರ್ಷೆಯಾಗದಿರುವ ಸಂದರ್ಭದಲ್ಲಿ, ಕಾರ್ಯ ನಿರ್ವಾಹ ಸಭೆಯವರಿಂದ ತತ್ಕಾಲದಲ್ಲಿ ಮೊಕರರ್ಮಾಡಲ್ಪಟ್ಟ ಮನುಷ್ಯನ ಹೆಸರಲ್ಲಿ ನಡಿಯುತಕ್ಕದ್ದು :

ಸಂಘಗಳಿಂದ ಮತ್ತು ಸಂಘಗಳ ಮೇಲೆ ದಾವೆಗಳು.

ಆದರೆ ಕಾರ್ಯ ನಿರ್ವಾಹ ಸಭೆಯವರು ಕೋರಲ್ಪಟ್ಟಾಗ್ಯೆ ಬೇರೆ ಇತರ ಉದ್ಯೋಗಸ್ಥನ (ಆಫೀಸರ) ನ್ನಾಗಲೀ ಮನುಷ್ಯನನ್ನಾಗಲೀ ಪ್ರತಿನಾಧಿಯಾಗಿ ಮೊಕರರ್ ಮಾಡದೆ ಇರುವ ಪಕ್ಷಕ್ಕೆ, ಅದರ ಅಧ್ಯಕ್ಷ, ಸಭಾಪತಿ, ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀ) ಗಳು ಇವರಮೇಲೆ ದಾವೆಯನ್ನು ಮಾಡುವುದು, ಆ ಸಂಘದಮೇಲೆ ಹಕ್ಕು ಅಥವಾ ವರಾತ ಉಂಟಾಗಿರುವ ಯಾವ ಮನುಷ್ಯನಿಗಾದರೂ ನ್ಯಾಯವಾಗಿರತಕ್ಕದ್ದು.